38

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: Comp: 9 :03-04
ಅಡಕ:- 3

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಾವೇರಿ ಭವನ, ಜಲಮಂಡಳಿ ಕಟ್ಟಡ,
7ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ: 29-8-2003.

ಗಣಕೀಕರಣ

ಸುತ್ತೋಲೆ - I

ವಿಷಯ:- ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಹೆಸರಿನಲ್ಲಿ ಹೊಸದಾಗಿ ಪಿ.ಡಿ. ಖಾತೆಯನ್ನು ತೆರೆಯುವ ಮತ್ತು ಸ್ಕ್ಯಾನ್ನಿಂಗ್ ಫೀಯನ್ನು ಜಮಾ ಮಾಡುವ ಕುರಿತು.

ಉಲ್ಲೇಖ:- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರದಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಖಜಾನೆ ನಿರ್ದೇಶಕರಿಗೆ ಬರೆದ ಪತ್ರ ಸಂಖ್ಯೆ: ಆ.ಇ.557:ಖಲೆ : 2003 ದಿನಾಂಕ:-25-8-03.

---

ರಾಜ್ಯದ ಎಲ್ಲಾ ಸಬ್ - ರಜಿಸ್ಟ್ರಾರ್ ಕಛೇರಿಯಲ್ಲಿ ಗಣಕೀಕರಣದ ಮೂಲಕ ದಸ್ತಾವೇಜನ್ನು ನೋಂದಾಯಿಸುವ ಕಾರ್ಯ ಶೀಘ್ರಗತಿಯಿಂದ ಪ್ರಾರಂಭವಾಗುತ್ತಲಿದೆ.

ನೋಂದಣಿಗಾಗಿ ಗಣಕೀಕರಣದ ಮೂಲಕ ಹಾಜರುಪಡಿಸಿಕೊಂಡ ದಸ್ತಾವೇಜಿನ ಪ್ರತಿ ಪುಟಕ್ಕೆ ರೂ.30.00 (ರೂ. ಮೂವತ್ತು ಮಾತ್ರ) ಸ್ಕ್ಯಾನಿಂಗ್ ಫೀ (scanning fee)ಯನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಈ ಮೂಲಕ ನಿರ್ದೇಶಿಸಿದೆ.

ಈ ಬಗ್ಗೆ ನೋಂದಣಿ ಫೀಯ ಕೋಷ್ಟಕವನ್ನು (Table of fees) ತಿದ್ದುಪಡಿ ಮಾಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದೆ. ಉಲ್ಲೇಖದ ಪತ್ರದನ್ವಯ ವಿವರಿಸಿದಂತೆ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಹೆಸರಿಗೆ ವೈಯಕ್ತಿಕ ಖಾತೆ ತೆರೆಯಲು ಆರ್ಥಿಕ ಇಲಾಖೆಯು ಖಜಾನೆ ನಿರ್ದೇಶಕರಿಗೆ ಸೂಚಿಸಿದೆ. ಪ್ರತಿ ಲಗತ್ತಿಸಿದೆ.

ಈ ರೀತಿ ವಸೂಲಿಯಾದ ಫೀಯನ್ನು, ನೋಂದಣಿ ಫೀ ಜಮಾ ಮಾಡುವ ರೀತಿಯಲ್ಲಿಯೇ, ಪ್ರತಿದಿನ ತಪ್ಪದೇ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ

ಹೆಸರಿನಲ್ಲಿ ಇರುವ ವೈಯಕ್ತಿಕ ಖಾತೆ (P.D.ಖಾತೆ) ಲೆಕ್ಕ ಶೀರ್ಷಿಕೆ " 8449 - Other Deposits - 00 - 120 - Miscellaneous Deposits - 9 - Other Deposits - 24 - Inspector General of Registration " ಈ ಖಾತೆಗೆ ಜಮಾ ಮಾಡತಕ್ಕದ್ದು.

ನೋಂದಣಿ ಫೀಯನ್ನು ಜಮಾ ಮಾಡಲು ಅನುಸರಿಸುತ್ತಿರುವ ಪದ್ಧತಿಯಂತೆಯೇ ಸ್ಕ್ಯಾನಿಂಗ್ ಫೀಯನ್ನು ಸಹ ಜಮಾ ಮಾಡಿ ಆ ಬಗ್ಗೆ ರಜಿಸ್ಟರ್ ಇಟ್ಟು ಅದರಲ್ಲಿ ಪ್ರತಿದಿನ ಸರ್ಕಾರದ ಪರವಾಗಿ ಹಣ ಸ್ವೀಕರಿಸಿದ ಸಂಬಂಧಪಟ್ಟ Treasury / Bank ಅಧಿಕಾರಿಯಿಂದ ಸಹಿ ಪಡೆಯತಕ್ಕದ್ದು.

ಈ ಸುತ್ತೋಲೆಗೆ ಲಗತ್ತಿಸಿದ ನಮೂನೆ - I ರಲ್ಲಿ ತಃಖ್ತೆಯನ್ನು ತಯಾರಿಸಿ ಸಂಬಂದಪಟ್ಟ Treasury / Bank ನಿಂದ ಲೆಕ್ಕ ಮರು ಹೊಂದಾಣಿಕೆ ಮಾಡಿ ಸಂಬಂಧಪಟ್ಟವರಿಂದ ಸಹಿ ಪಡೆದು ಅದನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು. ಜಿಲ್ಲಾ ನೋಂದಣಾಧಿಕಾರಿಯರವರು ತಮ್ಮ ಜಿಲ್ಲೆಯ ಪ್ರತಿಯೊಂದು ಉಪ ನೋಂದಣಿ ಕಛೇರಿಯಿಂದ ವರದಿಯನ್ನು ತರಿಸಿಕೊಂಡು ಕ್ರೋಡೀಕರಿಸಿ ನಮೂನೆ - II ರಲ್ಲಿ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

(ಡಿ.ಸತ್ಯಮೂರ್ತಿ, I.A.S.,)
ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪ್ರತಿಯನ್ನು:-

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದಶಿ ಮತ್ತು ಪ್ರಧಾನ ಕಾರ್ಯದರ್ಶಿ,ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸಂಪನ್ಮೂಲ ಹಾಗೂ ಬಜೆಟ್), ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ನೋಂದಣಿ) ಬಹುಮಹಡಿ ಕಟ್ಟಡ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
7. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಯವರಿಗೆ.
8. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಯವರಿಗೆ
9. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ
10. ಗಾರ್ಡ್ ಫೈಲ್.
11. ಕಛೇರಿ ಕಡತಕ್ಕೆ.

34

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 557 ಬಲೆ 2003

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 25.8.2003

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಮತ್ತು ಪ್ರಧಾನ ಕಾರ್ಯದರ್ಶಿ
ಆರ್ಥಿಕ ಇಲಾಖೆ
ಬೆಂಗಳೂರು-560 001

ಇವರಿಗೆ
ಖಜಾನೆ ನಿರ್ದೇಶಕರು,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಪೋಡಿಯಂ ಬ್ಲಾಕ್,
ಡಾ:ಅಂಬೇಡ್ಕರ್ ರಸ್ತೆ,
ಬೆಂಗಳೂರು-560 001.

ಮಾನ್ಯರೆ,

ವಿಷಯ : ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು, ಬೆಂಗಳೂರು ಇವರ ಹೆಸರಿನಲ್ಲಿ ಹೊಸದಾಗಿ ಪಿ.ಡಿ. ಖಾತೆ ತೆರೆಯುವ ಬಗ್ಗೆ.

------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು ಬೆಂಗಳೂರು ರವರ ಹೆಸರಿನಲ್ಲಿ ಪಿ.ಡಿ.ಖಾತೆಯನ್ನು ಲೆಕ್ಕಶೀರ್ಷಿಕೆ "8449-Other Deposits-00-120- Miscellaneous Deposits –9-others Deposits-24-I-G.R." ರ ಅಡಿ ತೆರೆಯುವಂತೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
ರಾ. ಸೂರಿಬಾಬು
(ಆರ್. ಸೂರಿಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಬಿ.ಸಿ.ಸಿ).

ಪ್ರತಿ: 1) ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಕರ್ನಾಟಕ ಜಲಸುಂಡಲಿ ಕಟ್ಟಡ, ಕಾವೇರಿ ಭವನ, 7ನೇ ಮಹಡಿ, ಬೆಂಗಳೂರು-56009. ರವರ ಮಾಹಿತಿಗಾಗಿ.

2) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ. (Expdr. VII)
~~ಆರ್ಥಿಕ ಆಯೋಗ ಕೋಶರವರ ಮಾಹಿತಿಗಾಗಿ.~~

Kan.let.

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನಮೂನೆ - I

...............ನೇ ಸಾಲಿನ ................................ತಿಂಗಳಿನ ಸ್ಕ್ಯಾನಿಂಗ್ ಶುಲ್ಕ ಶೇಖರಣೆಯ ಮಾಸಿಕ ವರದಿ

ಉಪನೋಂದಣಿ ಕಛೇರಿ ಹೆಸರು:———————— ಜಿಲ್ಲೆ:-

| ಕ್ರಂ.ಸಂ. | ದಿನಾಂಕ | ನೋಂದಾಯಿಸಿದ ಒಟ್ಟು ದಸ್ತಾವೇಜುಗಳ ಸಂಖ್ಯೆ | ಒಟ್ಟು ಪುಟಗಳು | ವಸೂಲಾದ ಸ್ಕ್ಯಾನಿಂಗ್ ಶುಲ್ಕ | ಖಜಾನೆಗೆ ಇರಸಾಲು ಮಾಡಿದ ಮೊತ್ತ | ಇರಸಾಲು ಮಾಡಿದ ದಿನಾಂಕ | ಷರಾ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| | | | | | | | |
| | | | | | | | |

ಒಟ್ಟು ಮೊತ್ತ ರೂ.—————— (ಅಕ್ಷರದಲ್ಲಿ ರೂ.—————————————————— ಗಳನ್ನು) ಪಿ.ಡಿ. ಖಾತೆ ಲೆಕ್ಕ ಶೀರ್ಷಿಕೆ " 8449-Other Deposits-00-120-Miscellaneous Deposits-9-Other Deposits-24-I.G.R." ಖಾತೆಗೆ ಜಮಾ ಮಾಡಲಾಗಿದೆ ಎಂದು ಧೃಢೀಕರಿಸಲಾಗಿದೆ.

ದಿನಾಂಕ:- ಉಪ-ನೋಂದಣಾಧಿಕಾರಿ ಉಪಖಜಾನೆ ಅಧಿಕಾರಿ/ಬ್ಯಾಂಕ್ ಅಧಿಕಾರಿ

# ಕರ್ನಾಟಕ ಸರ್ಕಾರ

## ನೋಂದಣಿ ಮತ್ತು ಮುದ್ರಾಂಕ ಇಲಾಖೆ

### ನಮೂನೆ - II

..............ನೇ ಸಾಲಿನ ..............................ತಿಂಗಳಿನ ಸ್ಕ್ಯಾನಿಂಗ್ ಶುಲ್ಕ ಶೇಖರಣೆಯ ...............ಜಿಲ್ಲೆಯ ಕ್ರೋಡೀಕೃತ ಮಾಸಿಕ ವರದಿ

| ಕ್ರಂ.ಸಂ. | ಉ.ನೊ.ಕಛೇರಿ ಹೆಸರು | ತಿಂಗಳಲ್ಲಿ ಸ್ಕ್ಯಾನಿಂಗ್ ಫೀ ವಸೂಲಾತಿಯೊಂದಿಗೆ ನೋಂದಾಯಿಸಿದ ಒಟ್ಟು ದಸ್ತಾವೇಜುಗಳ ಸಂಖ್ಯೆ | ಒಟ್ಟು ಪುಟಗಳ ಸಂಖ್ಯೆ | ಶೇಖರಿಸಲಾದ ಸ್ಕ್ಯಾನಿಂಗ್ ಫೀ ಒಟ್ಟು ಶುಲ್ಕ | ಷರಾ |
|---|---|---|---|---|---|
| ೧ | ೨ | ೩ | ೪ | ೫ | |
| | | | | | |
| ಒಟ್ಟು | | | | | |

ದಿನಾಂಕಃ-

ಜಿಲ್ಲಾ ನೋಂದಣಾಧಿಕಾರಿ.